# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1044 |
| ಮಾನ್ಯ ಸದಸ್ಯರ ಹೆಸರು. | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18-12-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಕೋಳಾಲ ಹೋಬಳಿ ನೀಲಗೊಂಡನಹಳ್ಳಿ ಗ್ರಾಮದ ಹೆಸರಿನ ಬದಲಿಗೆ ಕೆಲವೆಡೆ ಇರಕಸಂದ್ರ ಕಾಲೋನಿ (ಐ.ಕೆ.ಕಾಲೋನಿ) ಗ್ರಾಮ ಎಂದು ಉಲ್ಲೇಖಿಸಿ ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳು, ಗ್ರಾಮ ಪಂಚಾಯಿತಿ ಹಾಗೂ ಕೆಲವು ಖಾಸಗಿಯವರು ದಾಖಲೆಗಳಲ್ಲಿ ನಮೂದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ |
| ಆ) | ಬಂದಿದ್ದಲ್ಲಿ ಈ ರೀತಿ ನಮೂದಿಸಲು ಸರ್ಕಾರದಿಂದ ಇಲ್ಲಿಯವರೆಗೆ ಯಾವುದಾದರೂ ಅಧಿಸೂಚನೆ. ಸುತ್ತೋಲೆ, ಆದೇಶ ಹೊರಡಿಸಲಾಗಿದೆಯೇ: (ಸಂಪೂರ್ಣ ದಾಖಲೆಗಳನ್ನು ನೀಡುವುದು) | ಅನ್ವಯಿಸುವುದಿಲ್ಲ |
| ಇ) | ನೀಲಗೊಂಡನಹಳ್ಳಿ ಗ್ರಾಮದಲ್ಲಿರುವ ಪೋಸ್ಟ್ ಆಫೀಸ್, ಹಣಕಾಸು ಸಂಸ್ಥೆಗಳು, ಸರ್ಕಾರದ ವಿವಿಧ ಇಲಾಖೆಗಳು, ಸಂಸ್ಥೆಗಳು, ಗ್ರಾಮ ಪಂಚಾಯತಿ ಹಾಗೂ ಖಾಸಗಿಯವರು ಇರಕಸಂದ್ರ ಕಾಲೋನಿ (ಐ.ಕೆ.ಕಾಲೋನಿ) ಎಂದು ಇತ್ತೀಚಿಗೆ ನಮೂದಿಸುತ್ತಿರುವುದನ್ನು ಕೈಬಿಟ್ಟು ಗ್ರಾಮದ ಸಾರ್ವಜನಿಕರ ಮನವಿಯಂತೆ ಮೂಲ ಅಧಿಕೃತ ಹೆಸರಾದ ನೀಲಗೊಂಡನಹಳ್ಳಿ ಗ್ರಾಮವೆಂದೇ ಎಲ್ಲಾ ಸರ್ಕಾರದ ದಾಖಲೆ ಮತ್ತು ವ್ಯವಹಾರಗಳಲ್ಲಿ ನಮೂದಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು? (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಕಂಇ/46/ಭೂದಾಪು/2013, ದಿನಾಂಕ:20-07-2013 ಮತ್ತು ಸರ್ಕಾರದ ಆದೇಶ ಸಂಖ್ಯೆ: ಕಂಇ/1/ಭೂದಾಪು/2016, ದಿನಾಂಕ: 01-03-2016ರಂತೆ ದಾಖಲೆ ರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಕ್ರಮ ತೆಗೆದುಕೊಳ್ಳಲಾಗುತ್ತದೆ.<br><br>ಅದರಂತೆ, ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಮೂಲ ಗ್ರಾಮವಾದ ನೀಲಗೊಂಡನಹಳ್ಳಿ ಮಜರೆ ಇರಕಸಂದ್ರ ಕಾಲೋನಿ ಗ್ರಾಮವನ್ನು ಉಪ ಗ್ರಾಮವಾಗಿ ರಚನೆಗೆ ತಿದ್ದುಪಡಿ 2-ಇ ಅಧಿಸೂಚನೆಯನ್ನು (ಅಧಿಸೂಚನೆ ಸಂಖ್ಯೆ: ಭೂಉನಿ/ ಕಂದಾಯ ಗ್ರಾಮ (2ಇ) (02)/145/21-22, ದಿನಾಂಕ: 02-11-2022 ರಾಜ್ಯಪತ್ರ ದಿನಾಂಕ: 07-11-2022) ಹೊರಡಿಸಲಾಗಿದೆ (ಪ್ರತಿ ಲಗತ್ತಿಸಿದೆ). |

| | | |
|---|---|---|
| | | ಸದರಿ ತಿದ್ದುಪಡಿ 2-ಇ ಅಧಿಸೂಚನೆಗೆ ಗ್ರಾಮಸ್ಥರು ತಕರಾರು ಸಲ್ಲಿಸಿರುವ ಪ್ರಯುಕ್ತ ಪ್ರಾಥಮಿಕ ಅಧಿಸೂಚನೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುವುದಿಲ್ಲವಾದ್ದರಿಂದ ಐ.ಕೆ. ಕಾಲೋನಿ ಎಂದು ಯಾವುದೇ ಅಧಿಸೂಚನೆಯಾಗಿಲ್ಲದ ಪ್ರಯುಕ್ತ ಮೂಲ ಹೆಸರಾದ ನೀಲಗೊಂಡನಹಳ್ಳಿ ಗ್ರಾಮ ಎಂದೇ ಮುಂದುವರೆಸಲಾಗುತ್ತಿದೆ. |

<u>**ಸಂಖ್ಯೆ: ಕಂಇ 214 ಎಸ್‌ಎಸ್‌ಸಿ 2024**</u>

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು